ತಮ್ಮ ಸ್ವಂತ ಬೆಳವಣಿಗೆಯ ದೃಷ್ಟಿಯಿಂದ ಶಿಕ್ಷಕರು ಅರಿವಿನ ದಿಗಂತವನ್ನು ವಿಸ್ತರಿಸಿಕೊಳ್ಳಲು ಹಾಗೂ ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಉತ್ತಮವಾಗಿ ಸಜ್ಜುಗೊಳಿಸಿಕೊಳ್ಳಲು ಅವರು ಒತ್ತಡರಹಿತ ವಾತಾವರಣದಲ್ಲಿ ಸಮಯವನ್ನು ಅರ್ಥಪೂರ್ಣವಾಗಿ ಕಳೆಯುವ ಅಗತ್ಯವಿದೆ.

ಶಿಕ್ಷಕರ ಅಭಿವೃದ್ಧಿಯ ಹೊಣೆ ಶಿಕ್ಷಕರದೇ

ಆ ತರಗತಿಯು ಈಶಾನ್ಯ ಕರ್ನಾಟಕದ ಯಾವುದೇ ಸಾಮಾನ್ಯ ಹಿರಿಯ ಪ್ರಾಥಮಿಕ ಶಾಲೆಯ ಐದನೆಯ ತರಗತಿಯ ಕೋಣೆಯಂತೆ ಕಾಣುತ್ತಿತ್ತು. ಶಿಕ್ಷಕಿಯೊಬ್ಬರು ಪ್ರಥಮ ಭಾಷೆ ಕನ್ನಡವನ್ನು ಪಾಠ ಮಾಡುತ್ತಿದ್ದರು. ಜನಪದ ಸಾಹಿತ್ಯದಿಂದ ಆಯ್ದು, ಪ್ರಖ್ಯಾತ 'ಭಾಗ್ಯದ ಬಳೆಗಾರ' ಹಾಡಿನ ಮೊದಲೆರಡು ಚರಣಗಳನ್ನು ಅವರು ಕಲಿಸುತ್ತಿದ್ದರು. ಸುಮಾರು ನಲವತ್ತು ವಿದ್ಯಾರ್ಥಿಗಳು ಅದನ್ನು ಗಮನವಿಟ್ಟು ಆಲಿಸುತ್ತಿದ್ದರು ಈ ಸುಂದರವಾದ ಪದ್ಯವನ್ನು ದೂರವಾಣಿ, ಮಿಂಚಂಚೆಗಳ್ಯಾವುದೂ ಇರದ ಕಾಲದಲ್ಲಿ, ತಮ್ಮ ಆಪ್ತೇಷ್ಟರಿಗೆ ಸಂದೇಶವನ್ನು ಕಳಿಸಲು, ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದ ಜನರನ್ನು ಸಂಪೂರ್ಣವಾಗಿ ಅವಲಂಬಿಸಬೇಕಾಗಿದ್ದ ಕಾಲದಲ್ಲಿ ರಚಿಸಲಾಗಿದೆ. ಹೊಸದಾಗಿ ಮದುವೆಯಾಗಿರುವ ಒಬ್ಬ ಹೆಣ್ಣುಮಗಳು ಮತ್ತು ಬಳೆಗಾರನೊಬ್ಬನ ನಡುವಿನ ಸಂಭಾಷಣೆಯನ್ನು ಈ ಹಾಡು ಚಿತ್ರಿಸುತ್ತದೆ. ಆ ಹೆಣ್ಣುಮಗಳು ತಾನು ಸೌಖ್ಯವಾಗಿದ್ದೇನೆ ಎಂದು ತನ್ನ ತವರಿಗೆ ಸಂದೇಶ ತಿಳಿಸುವಂತೆ ಬಳೆಗಾರನನ್ನು ಕೇಳಿಕೊಳ್ಳುತ್ತಾಳೆ. ಹಾಗೆ ಕೇಳುತ್ತಲೇ ಸ್ಪಷ್ಟ ವರ್ಣನೆಗಳ ಮೂಲಕ ನಿರ್ದಿಷ್ಟವಾಗಿ ತನ್ನ ತವರುಮನೆಗೆ ಹೋಗುವ ದಾರಿಯನ್ನು ಬಳೆಗಾರನಿಗೆ ತಿಳಿಸುತ್ತಾಳೆ.

ಶಿಕ್ಷಕಿಯು ಪದ್ಯದಲ್ಲಿ ಸಂಪೂರ್ಣ ತಲ್ಲೀನರಾಗಿ ಉತ್ಸಾಹದಿಂದ ಪಾಠ ಮಾಡುತ್ತಿದ್ದರು. ಮೊದಲೇ ಸಿದ್ಧತೆ ಮಾಡಿಕೊಂಡು ಬಂದಿದ್ದರು ಎಂಬುದು ಸ್ಪಷ್ಟವಾಗಿತ್ತು. ಹಲವಾರು ಕಠಿಣ ಪದಗಳ ಅರ್ಥವನ್ನು ಕಪ್ಪು ಹಲಗೆಯ ಮೇಲೆ ಬರೆದರು ಹಾಗೂ ಅವುಗಳ ಅರ್ಥವನ್ನು ವಿವರಿಸಿದರು. ಜೊತೆಗೆ ಪರಿಪೂರ್ಣ ಎನ್ನುವಷ್ಟರ ಮಟ್ಟಿಗೆ ಲಯಬದ್ಧವಾಗಿ, ಭಾವಪೂರ್ಣವಾಗಿ ಆ ಹಾಡನ್ನು ಸ್ವತಃ ಹಾಡಿದರು. ಹಾಡುವಾಗ ತನ್ನ ವಿದ್ಯಾರ್ಥಿಗಳು ಜೊತೆಗೂಡಿ ಹಾಡುವಂತೆ ಒಂದು ಉತ್ಸಾಹಪೂರ್ಣ ಕಲಿಕೆಯ ವಾತಾವರಣವನ್ನು ನಿರ್ಮಿಸಿದರು. ಪದಗಳ ವರ್ಗೀಕರಣ, ಸಮಾನಾರ್ಥಕ ಪದಗಳು ಇತ್ಯಾದಿ ಭಾಷೆಯ ಅಂಶಗಳು ಮಕ್ಕಳಿಂದಲೇ ಹೊರಬರುವಂತೆ ಮಾಡಿದರು. ಹಾಡಿನ ಸಾರತತ್ತ್ವವನ್ನು ಮಕ್ಕಳ ಆಡುನುಡಿಯಲ್ಲಿ ವರ್ಣಿಸಿದರು. ತರಗತಿಯ ಕೊನೆಯಲ್ಲಿ, ಮಕ್ಕಳು ಅದನ್ನು ಸರಿಯಾಗಿ ಕಲಿತಿದ್ದಾರೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮಕ್ಕಳಿಗೆ ಕೆಲವು ಪುನರಾವಲೋಕನದ ಪ್ರಶ್ನೆಗಳನ್ನು ಕೇಳಿದರು. ಮುಂದಿನ ತರಗತಿಯ ವೇಳೆಗೆ, ತಮ್ಮದೇ ಕಲ್ಪನೆಯ ಜನಪದ ಹಾಡುಗಳನ್ನು ಬರೆದುಕೊಂಡು ಬರುವಂತೆ ಹಾಗೂ ಮೂರ್ನಾಲ್ಕು ಹೊಸ ಜನಪದ ಹಾಡುಗಳನ್ನು ಗುರುತಿಸುವಂತೆ ಮಕ್ಕಳಿಗೆ ಮನೆಗೆಲಸ ವಹಿಸಿದರು.

ಮೇಲೆ ಉಲ್ಲೇಖಿಸಿದ ತರಗತಿಯ ಅನನ್ಯತೆಯೆಂದರೆ, ಅಲ್ಲಿನ ಕಲಿಕಾರ್ಥಿಗಳು ನಿಜವಾದ ವಿದ್ಯಾರ್ಥಿಗಳಾಗಿರಲಿಲ್ಲ. ಬದಲಿಗೆ, ಕಳೆದ ಬೇಸಿಗೆ ರಜೆಯಲ್ಲಿ ಹೈದರಾಬಾದ್‌ನ ಡಾನ್ ಬಾಸ್ಕೋ ತರಬೇತಿ ಕೇಂದ್ರದಲ್ಲಿ ನಡೆದ ಐದು ದಿನಗಳ ಸನಿವಾಸ ಕಾರ್ಯಾಗಾರದ ಅಂಗವಾದ ಭಾಷೆ ಮತ್ತು ಪದ್ಯ ಬೋಧನೆಯ ಅಧಿವೇಶನದಲ್ಲಿ ಭಾಗವಹಿಸಲು ಸ್ವಇಚ್ಛೆಯಿಂದ ಬಂದ ಕರ್ನಾಟಕದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲಾ ಶಿಕ್ಷಕರಾಗಿದ್ದರು. ಅತ್ಯುತ್ಸಾಹದಿಂದ ತರಗತಿಗೆ ಪಾಠ ಮಾಡಿದವರು, ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಪಶ್ಚಿಮ ಇಳಕಲ್ ಕ್ಲಸ್ಟರ್‌ನ ವಡ್ಡರಹೊಸೂರಿನ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ.

ಮೇ ತಿಂಗಳಿನಲ್ಲಿ ಮೂರು ಬೇರೆ ಬೇರೆ ಜಾಗಗಳಲ್ಲಿ ನಡೆದ ಕಾರ್ಯಾಗಾರಗಳಲ್ಲಿ ಒಂಬತ್ತು ಜಿಲ್ಲೆಗಳಲ್ಲಿನ ವಿವಿಧ ಶಾಲೆಗಳಲ್ಲಿ ವಿವಿಧ ವಿಷಯಗಳನ್ನು ಬೋಧಿಸುತ್ತಿರುವ ಇನ್ನೂರಾ ಹತ್ತು ಪ್ರಾಥಮಿಕ ಶಾಲಾ ಶಿಕ್ಷಕರೆಲ್ಲರೂ ಸ್ವಇಚ್ಛೆಯಿಂದ ಭಾಗವಹಿಸಿದ್ದು ಗಮನಾರ್ಹ ಸಂಗತಿ. ತೊಂಬತ್ತು ಕನ್ನಡ ಭಾಷಾ ಶಿಕ್ಷಕರು ಮತ್ತು ಎಪ್ಪತ್ತೊಂಬತ್ತು ಸಮಾಜ ವಿಜ್ಞಾನದ ಶಿಕ್ಷಕರು ಹೈದರಾಬಾದ್‌ನ ಡಾನ್ ಬಾಸ್ಕೋ ಹಾಗೂ ಜೀವನ ಜ್ಯೋತಿ ಆಶ್ರಯಧಾಮಗಳಲ್ಲಿ ಸನಿವಾಸ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದರು. ನಲವತ್ತೊಂದು ವಿಜ್ಞಾನ ಹಾಗೂ ಗಣಿತ ಶಿಕ್ಷಕರು ಕಲಬುರಗಿಯ ಕಮಲಾಪುರದ ಮೈರಾಡಾ ತರಬೇತಿ ಕೇಂದ್ರದಲ್ಲಿ ನಡೆದ

ಕಾರ್ಯಾಗಾರದಲ್ಲಿ ಪಾಲ್ಗೊಂಡರು. ಒಟ್ಟಾರೆ ಐದು ದಿನಗಳಲ್ಲಿ ಮೊದಲನೆಯ ನಾಲ್ಕು ದಿನಗಳನ್ನು ಶೈಕ್ಷಣಿಕ ದೃಷ್ಟಿಕೋನದ ವಿಷಯಗಳಿಗೆ ಹಾಗೂ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳಿಗೆ ಮೀಸಲಿಡಲಾಗಿತ್ತು. ಕೊನೆಯ ದಿನ ಪ್ರಸಿದ್ಧ ಸಾಲಾರ್‌ಜಂಗ್ ವಸ್ತುಸಂಗ್ರಹಾಲಯ, ವಿಜ್ಞಾನ ವಸ್ತುಸಂಗ್ರಹಾಲಯ ಮತ್ತು ಪ್ರಾಣಿಸಂಗ್ರಹಾಲಯಗಳಿಗೆ ಭೇಟಿಯನ್ನು ಆಯೋಜಿಸಲಾಗಿದ್ದು ಅದು ಶಿಕ್ಷಕರಿಗೆ ಆನಂದಕರ ಅನುಭವವನ್ನು ನೀಡಿತು.

ಸದ್ಯಕ್ಕೆ ಸೇವಾನಿರತ ಶಿಕ್ಷಕರಿಗೆ ಡಿಎಸ್‌ಇಆರ್‌ಟಿ/ಎಸ್‌ಎಸ್‌ಎ ವತಿಯಿಂದ ಪ್ರತಿವರ್ಷ ಹನ್ನೆರಡು ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. ಈ ಹನ್ನೆರಡು ದಿನಗಳಲ್ಲಿ, ಐದು ದಿನಗಳು ಕಾರ್ಯಾಗಾರಕ್ಕೆ ಮೀಸಲಾಗಿದ್ದವು. (ಅದರಲ್ಲಿ, ಒಂದರಿಂದ ಮೂರನೆಯ ತರಗತಿಯ ನಲಿ–ಕಲಿ ಶಿಕ್ಷಕರಿಗೆ 'ಸಂಭ್ರಮ'; ನಾಲ್ಕರಿಂದ ಐದನೆಯ ತರಗತಿಯ ಶಿಕ್ಷಕರಿಗೆ 'ಸಮಾಗಮ'; ಆರರಿಂದ ಏಳನೆಯ ತರಗತಿಯ ವಿಜ್ಞಾನ ಶಿಕ್ಷಕರಿಗೆ 'ವಿಕಸನ'; ಆರರಿಂದ ಏಳನೆಯ ತರಗತಿಯ ಗಣಿತ ಶಿಕ್ಷಕರಿಗೆ 'ಸಿಂಚನ' ಎಂಬ ವಿವಿಧ ತರಬೇತಿ ಮಾಡ್ಯೂಲ್*ಗಳನ್ನು ಆಯೋಜಿಸಲಾಗುತ್ತದೆ.). ಉಳಿದ ಏಳು ದಿನಗಳನ್ನು ಕ್ಲಸ್ಟರ್‌ಗಳಲ್ಲಿ ನಡೆಯುವ ಮಾಸಿಕ ಸಮಾಲೋಚನಾ ಸಭೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ಕಳೆದ ಕೆಲವು ವರ್ಷಗಳ ಅನುಭವದಿಂದ ಹೇಳುವುದಾದರೆ, ಸಿಆರ್‌ಸಿಯ ಮಾಸಿಕ ಸಭೆಗಳಲ್ಲಿ ಮೊದಲಿನ ಎರಡು ತಾಸು ಇಲಾಖೆಯ ಆಡಳಿತಾತ್ಮಕ ಸಮಸ್ಯೆಗಳನ್ನು ಚರ್ಚಿಸುವುದರಲ್ಲಿ ಕಳೆಯುತ್ತದೆ. ಉಳಿದೆರಡು ತಾಸುಗಳನ್ನು ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಅಗತ್ಯಗಳಿಗೆ ಮೀಸಲಿಡಲಾಗುತ್ತದೆ. ವಿವಿಧ ವಿಷಯಗಳನ್ನು ಕಲಿಸುವ ಶಿಕ್ಷಕರು ಈ ಸಭೆಗಳಲ್ಲಿ ಭಾಗವಹಿಸುವುದರಿಂದ, ಶಿಕ್ಷಕರ ವಿಭಿನ್ನ ಅಗತ್ಯಗಳನ್ನು ಇಲ್ಲಿ ಹೆಚ್ಚಾಗಿ ಚರ್ಚಿಸುವುದಿಲ್ಲ. ಶಿಕ್ಷಕರಿಗೆ ನೀಡಲಾಗುವ ವಾರ್ಷಿಕ ಐದು ದಿನಗಳ ತರಬೇತಿಗೆ ಸಂಬಂಧಿಸಿದಂತೆ ಗಮನಿಸಲಾದ ಒಂದು ಮುಖ್ಯ ಅಂಶವೆಂದರೆ, ಸಮಾಜ ವಿಜ್ಞಾನ ಹಾಗೂ ಭಾಷಾ ಶಿಕ್ಷಕರಿಗೆ ನಿರ್ದಿಷ್ಟ ಮಾಡ್ಯೂಲ್‌ಗಳಿಲ್ಲದಿರುವುದು. ಇದರರ್ಥ, ವಿಷಯ ಸಂಪನ್ನತೆಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಈ ಶಿಕ್ಷಕರಿಗೆ ಇರುವ ಅಗತ್ಯಗಳನ್ನು ಸರಿಯಾಗಿ ಗುರುತಿಸಿಲ್ಲ ಹಾಗೂ ಇದನ್ನೊಂದು ಆದ್ಯತೆಯೆಂದು ಪರಿಗಣಿಸಲೇ ಇಲ್ಲ.

ಇದಲ್ಲದೆ ಶಾಲೆಯ ಕಾರ್ಯಾವಧಿಯಲ್ಲಿ ಶಿಕ್ಷಕರನ್ನು ತರಬೇತಿಗೆಂದು ಕಳಿಸುವುದು ಹಲವಾರು ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ.

---

* ಶಿಕ್ಷಕರ ತರಬೇತಿಗೆ ಬಳಸುವ ಪಠ್ಯಾಧಾರಿತ ಸಂಪನ್ಮೂಲ.

ಮೊದಲನೆಯದಾಗಿ, ತರಗತಿಯ ವೇಳೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಂದ ದೂರವಿರುವ ಕಾರಣ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರಂತರತೆಯನ್ನು ಸಾಧಿಸುವುದು ಕಷ್ಟವಾಗುತ್ತದೆ. ಕಲಿಕೆಯಲ್ಲಿ ಅದಾಗಲೇ ಹಿಂದೆ ಬಿದ್ದಿರುವ ಮಕ್ಕಳ ಮೇಲೆ ಇದು ಬೀರುವ ಪರಿಣಾಮವು ಇನ್ನೂ ಹೆಚ್ಚು ಗಂಭೀರವಾದದ್ದು. ಎರಡನೆಯದಾಗಿ, ಶಿಕ್ಷಕರ ದೃಷ್ಟಿಯಿಂದ ನೋಡಿದರೆ, ಶಾಲೆಯ ಅವಧಿಯಲ್ಲಿ ನಿರ್ವಹಿಸಬೇಕಾದ ಹಲವಾರು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕೆಲಸ ಕಾರ್ಯಗಳ ನಡುವೆ ನಿರಂತರವಾಗಿ ವೃತ್ತಿ ಅಭಿವೃದ್ಧಿಯಲ್ಲಿ ತೊಡಗಿಕೊಳ್ಳುವುದು ಅವರಿಗೆ ಕಷ್ಟವಾಗುತ್ತದೆ. ತಮ್ಮ ಸ್ವಂತ ಬೆಳವಣಿಗೆಯ ದೃಷ್ಟಿಯಿಂದ ತಮ್ಮ ಅರಿವಿನ ದಿಗಂತವನ್ನು ವಿಸ್ತರಿಸಿಕೊಳ್ಳಲು ಹಾಗೂ ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ತಮ್ಮನ್ನು ತಾವೇ ಉತ್ತಮವಾಗಿ ಸಜ್ಜುಗೊಳಿಸಿಕೊಳ್ಳಲು ಅವರು ಒತ್ತಡರಹಿತ ವಾತಾವರಣದಲ್ಲಿ ಸಮಯವನ್ನು ಅರ್ಥಪೂರ್ಣವಾಗಿ ಕಳೆಯುವ ಅಗತ್ಯವಿದೆ. ಮೂರನೆಯದಾಗಿ, ಶಿಕ್ಷಕರನ್ನು ಈ ರೀತಿ ತರಗತಿಯಿಂದ ದೂರಮಾಡುವುದರಿಂದ ಖಾಸಗಿ ಶಾಲೆಗಳು ಹೆಚ್ಚು ಶಿಸ್ತುಬದ್ಧವಾಗಿವೆ ಹಾಗೂ ಸಮಯ ಪರಿಪಾಲನೆಯನ್ನು ಸಾಕಷ್ಟು ಉತ್ತಮವಾಗಿ ಮಾಡುತ್ತವೆ ಎಂಬ ಪೋಷಕರ ಮತ್ತು ಭಾಗೀದಾರರ ನಂಬಿಕೆಯು ಇನ್ನಷ್ಟು ಬಲಗೊಳ್ಳುತ್ತದೆ.

ಈ ಸವಾಲುಗಳ ಹಿನ್ನಲೆಯಲ್ಲಿ ಮೇಲಿನ ಕಾರ್ಯಾಗಾರದಿಂದ ನಮಗೆ ದೊರೆತ ಒಳನೋಟಗಳು, ಸೇವಾನಿರತ ಶಿಕ್ಷಕರ ದೀರ್ಘಕಾಲೀನ ವೃತ್ತಿಪರ ಅಭಿವೃದ್ಧಿಯ ಅಗತ್ಯಗಳಿಗೆ ಪರಿಣಾಮಕಾರಿ ಪರ್ಯಾಯಮಾರ್ಗಗಳನ್ನು ಈ ಕೆಳಗಿನ ಆಯಾಮಗಳಲ್ಲಿ ಸೂಚಿಸಬಲ್ಲವು:

ಅ. ಸಿದ್ಧತೆಯ ಹಂತ – ಸೂಕ್ತ ವಸ್ತುವಿಷಯದ ಆಯ್ಕೆ

ಕಾರ್ಯಾಗಾರದ ಮೊದಲೆರಡು ದಿನ ಶಿಕ್ಷಕರು ತರಗತಿಕೋಣೆಯಲ್ಲಿನ ತಮ್ಮ ಆಚರಣೆಯ ಹಿನ್ನೆಲೆಯಲ್ಲಿ, ತಮ್ಮದೇ ದೃಷ್ಟಿಕೋನಗಳನ್ನು ಪರಾಮರ್ಶಿಸಲು ಅನುಕೂಲವಾಗುವಂತೆ ಅವಕಾಶಗಳನ್ನು ಸೃಷ್ಟಿಸಲಾಗಿತ್ತು. ಶೈಕ್ಷಣಿಕ ಮನೋವಿಜ್ಞಾನದ ಹಿನ್ನೆಲೆಯನ್ನು ಹೊಂದಿರುವ, ಶಿಕ್ಷಕಿಯೂ ಆಗಿರುವ ಕಮಲಾ ಮುಕುಂದ ಅವರು ಬರೆದ– 'ನೀನಿವತ್ತು ಶಾಲೆಯಲ್ಲಿ ಏನನ್ನು ಕೇಳಿದೆ?' ('ವಾಟ್ ಡಿಡ್ ಯು ಆಸ್ಕ್ ಅಟ್ ಸ್ಕೂಲ್ ಟುಡೇ?') ಎಂಬ ಪುಸ್ತಕದ ಮೂರು ಅಧ್ಯಾಯಗಳನ್ನು ಚರ್ಚಿಸಲಾಯಿತು. ಮೆದುಳಿನ ಸಂರಚನೆ, ಕಾರ್ಯ ಮತ್ತು ವಿಕಾಸ, ಮಗುವಿನ ಬೆಳವಣಿಗೆಯ ಹಂತಗಳು ಹಾಗೂ ಅರಿವಿನ ಬೆಳವಣಿಗೆಯಲ್ಲಿ ಅವುಗಳ ಪಾತ್ರ, ಕಲಿಕೆಯಲ್ಲಿ ಭಾವನಾತ್ಮಕ ಸಂವೇದನೆಗಳ ಪಾತ್ರ, ಮಗುವಿನ ಭಾವನೆಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಬೇಕಾದ ಅಗತ್ಯ ಇತ್ಯಾದಿ

ವಿಷಯಗಳು ಚರ್ಚೆಯ ಮುಖ್ಯ ಅಂಶಗಳಾಗಿದ್ದವು. ಮುಖ್ಯವಾಗಿ ನಿರ್ದೇಶಿತ ಓದು, ಅರ್ಥಗ್ರಹಿಕೆ ಹಾಗೂ ಪರ್ಯಾಲೋಚನೆಗಳ ಮೂಲಕ ಒಟ್ಟಾರೆ ಸಂವಾದವನ್ನು ನಿರ್ವಹಿಸಲಾಯಿತು. ಇಂತಹ ಸಂಕೀರ್ಣ ಸಮಸ್ಯೆಗಳನ್ನು ಕೂಡ ವಯಸ್ಕ ಕಲಿಕಾರ್ಥಿಗಳ ಸ್ವಂತ ಅನುಭವಗಳ ಆಧಾರದಲ್ಲಿ ಚರ್ಚಿಸಬಹುದು ಎಂಬುದನ್ನು ನಾವು ಕಂಡುಕೊಂಡೆವು. ಇಪ್ಪತ್ತೆರಡು ವರ್ಷಗಳಷ್ಟು ಅನುಭವವನ್ನು ಹೊಂದಿರುವ ಹಿರಿಯ ಶಿಕ್ಷಕರೊಬ್ಬರು ತಮ್ಮ ದೀರ್ಘಕಾಲೀನ ಸೇವಾವಧಿಯಲ್ಲಿ ಕನಿಷ್ಠ ಐದಾರು ಬಾರಿ ತಾನು ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷೆಯನ್ನು ನೀಡಿದ ಮತ್ತು ಇನ್ನು ಹಾಗೆ ಮಾಡುವುದಿಲ್ಲವೆಂದು ತೀರ್ಮಾನಿಸಿರುವ ಸಂಗತಿಯನ್ನು ಮುಕ್ತವಾಗಿ ಹಂಚಿಕೊಂಡಿದ್ದನ್ನು ನೋಡಿದರೆ, ಈ ಅಧಿವೇಶನಗಳು ಶಿಕ್ಷಕರ ಮೇಲೆ ಗಾಢ ಪರಿಣಾಮವನ್ನು ಬೀರಿವೆ ಎನ್ನುವುದು ಕಂಡುಬರುತ್ತದೆ.

ಉಳಿದೆರಡು ದಿನಗಳಿಗಾಗಿ ನಿರ್ದಿಷ್ಟ ವಿಷಯಗಳಲ್ಲಿ ಆಯ್ದುಕೊಂಡ ವಸ್ತುವಿಷಯಗಳು ಕೂಡ ಶಿಕ್ಷಕರಿಗೆ ಉತ್ತೇಜಕವಾಗಿದ್ದವು. ವಿಜ್ಞಾನದಲ್ಲಿ ಆಯ್ದುಕೊಂಡ 'ನೀರು' ಎಂಬ ವಿಷಯವನ್ನು ಕುರಿತಂತೆ, ದೈನಂದಿನ ಜೀವನದಲ್ಲಿ ಅದರ ಪಾತ್ರ, ಭೂಮಿಯಲ್ಲಿ ಅದರ ಮೂಲದ ಶೋಧನೆ, ಅದೊಂದು ಇಂಗಾಲರಹಿತ ಸಂಯುಕ್ತವಾಗಿರುವುದರ ಪರಿಕಲ್ಪನೆ, ಸಸ್ಯ ಮತ್ತು ಪ್ರಾಣಿಗಳಲ್ಲಿ ಅದರ ಜೈವಿಕ ಮಹತ್ವ ಹಾಗೂ ಅದರ ಮೇಲ್ಮೈ ಒತ್ತಡ ಮತ್ತು ಸಂಯೋಜಕ ಬಲ ಇತ್ಯಾದಿಗಳನ್ನು ವಿವಿಧ ಆಯಾಮಗಳಿಂದ ವಿಶ್ಲೇಷಿಸಲಾಯಿತು. ಹೀಗೆ ಒಂದೇ ವಿಷಯದ ಕುರಿತು ಜೀವವಿಜ್ಞಾನ, ರಸಾಯನವಿಜ್ಞಾನ ಮತ್ತು ಭೌತವಿಜ್ಞಾನಗಳನ್ನು ಸಂಯೋಜಿಸುವ ಪ್ರಯತ್ನ ಅಲ್ಲಿತ್ತು. ಅದೇ ರೀತಿ, ಗಣಿತದಲ್ಲಿ, 'ಮಾಪನದ ಮಹತ್ವ' ಎಂಬ ವಿಷಯವನ್ನು ಇಟ್ಟುಕೊಂಡು ಮುಖ್ಯವಾಗಿ ಕ್ಷೇತ್ರ ಮತ್ತು ಪರಿಧಿ ಹಾಗೂ ಅವುಗಳ ನಡುವಿನ ಸಂಬಂಧದ ಕುರಿತು ಚರ್ಚಿಸಲಾಯಿತು. ಸಮಾಜ ವಿಜ್ಞಾನದಲ್ಲಿ, 'ಇತಿಹಾಸಪೂರ್ವ' ಕಾಲದ ಬೇಟೆಗಾರರು ಹಾಗೂ ಸಂಗ್ರಹಕಾರರು' ಎನ್ನುವುದು ಚರ್ಚೆಯ ಪ್ರಧಾನ ವಿಷಯವಾಗಿತ್ತು.

ಈ ಹಂತದಲ್ಲಿ, ಸೂಕ್ತ ಓದಿನ ಸಾಮಗ್ರಿಯ ಪೂರೈಕೆ (ಇವುಗಳಲ್ಲಿ ಕೆಲವನ್ನು ಇಂಗ್ಲಿಷಿನಿಂದ ಭಾಷಾಂತರಿಸುವುದೂ ಸೇರಿದಂತೆ), ವಿಷಯತಜ್ಞ ಶಿಕ್ಷಕರನ್ನು ಒಟ್ಟಾಗಿಸಿ ವಿವಿಧ ಅಧಿವೇಶನಗಳನ್ನು ಬೆಸೆಯುವುದು, ಪ್ರಸ್ತುತ ಚಟುವಟಿಕೆಗಳನ್ನು ಪರಿಚಯಿಸುವುದು ಇತ್ಯಾದಿ ಸಂಪನ್ಮೂಲ ವ್ಯಕ್ತಿಗಳ ಸಮಗ್ರ ಹಾಗೂ ಆಳವಾದ ಸಿದ್ಧತೆಗೆ ಮಹತ್ವವನ್ನು ನೀಡಲಾಯಿತು. ಇವೆಲ್ಲವುಗಳ ಕಾರಣ ಶಿಕ್ಷಕರಿಗೆ ಕಾರ್ಯಾಗಾರದಿಂದ ಅತ್ಯಮೂಲ್ಯ ಅನುಭವಗಳು ದೊರೆಯುವಂತಾದವು.

ಬ. ಕಾರ್ಯಾಗಾರದ ಅವಧಿಯಲ್ಲಿ

ಈ ಹಂತದಲ್ಲಿ ಹಲವಾರು ಅಂಶಗಳನ್ನು ಪರಿಗಣಿಸುವ ಅಗತ್ಯವಿದೆ. ವೃತ್ತಿಪರರಾಗಿರುವುದು ಹಾಗೂ ಸಮಯ ಪರಿಪಾಲನೆಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದರ ಜೊತೆಗೆ ವಿಷಯಕ್ಕೆ ಸಂಬಂಧಿಸಿದಂತೆ ತರಬೇತಿ ನೀಡುವವರ ಜ್ಞಾನ ಮತ್ತು ಪರಿಣಿತಿ, ಸಾಂದರ್ಭಿಕ ಉದಾಹರಣೆಗಳನ್ನು ಕೊಡುವ ಮೂಲಕ ಅಧಿವೇಶನಗಳು ತರಗತಿಕೋಣೆಯ ಬೋಧನೆಗೆ ಪ್ರಸ್ತುತವಾಗಿರುವಂತೆ ಮಾಡುವುದು, ಶಿಕ್ಷಕರು ತಮ್ಮದೇ ನಂಬಿಕೆ ಮತ್ತು ಆಚರಣೆಗಳನ್ನು ಪರಿಶೀಲಿಸಿಕೊಳ್ಳುವ ಹಾಗೆ ಅವಕಾಶಗಳನ್ನು ನಿರ್ಮಿಸುವುದು, ಅವರು ತಮ್ಮ ನಿಲುವು–ದೃಷ್ಟಿಕೋನಗಳನ್ನು ವ್ಯಕ್ತಪಡಿಸುವಂತೆ ಪ್ರೋತ್ಸಾಹಿಸುವುದು, ಮುಖ್ಯವಾದ ಕಲಿಕೆಯ ಅಂಶಗಳ ಮೇಲೆ ಒತ್ತು ನೀಡುವುದು ಹಾಗೂ ರಚನಾತ್ಮಕ ಹಿಮ್ಮಾಹಿತಿಗಳನ್ನು ಪಡೆದುಕೊಳ್ಳುವುದು, ಹೀಗೆ ಎಲ್ಲವೂ ಅತ್ಯಂತ ಮುಖ್ಯವಾಗುತ್ತವೆ. ಬಿಡುವಿನ ವೇಳೆಯಲ್ಲಿ ಉಚಿತ ಹಾಗೂ ಪ್ರಸ್ತುತವಾದ ಸಹಪಠ್ಯ ಚಟುವಟಿಕೆಗಳನ್ನು ಪರಿಚಯಿಸುವುದು, ಪರಸ್ಪರ ಭಾಗವಹಿಸುವವರ ನಡುವೆ ಹಾಗೂ ಅವರ ಮತ್ತು ತರಬೇತಿ ನೀಡುವವರ ನಡುವೆ ಬಾಂಧವ್ಯ ಏರ್ಪಡುವಂತೆ ನೋಡಿಕೊಳ್ಳುವುದು ಇತ್ಯಾದಿಗಳಿಗೆ ಗಮನವನ್ನು ನೀಡುವ ಅಗತ್ಯವಿದೆ. ಕಾರ್ಯಾಗಾರ ನಡೆಯುವ ತಾಣವು ಅದ್ದೂರಿಯಾಗಿ ಅಲ್ಲದಿದ್ದರೂ ಸನಿವಾಸ ತರಬೇತಿಯಲ್ಲಿ ಭಾಗವಹಿಸುವ ಮಹಿಳಾ ಮತ್ತು ಪುರುಷ ಶಿಕ್ಷಕರೆಲ್ಲರಿಗೂ ಎಲ್ಲ ತರಹದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದ್ದರೆ ಮಾತ್ರ ಇವೆಲ್ಲವೂ ಸಾಧ್ಯವಾಗುತ್ತದೆ.

ಕ. ಕಾರ್ಯಾಗಾರದ ನಂತರ

ಇಂತಹ ಗುಣಮಟ್ಟದ ಕಾರ್ಯಾಗಾರಗಳನ್ನು ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಆಯೋಜಿಸುವುದರ ಜೊತೆಗೆ ಶಿಕ್ಷಕರು ಕಲಿಕೆಯ ನಿರಂತರತೆಯನ್ನು ಕಾಯ್ದುಕೊಳ್ಳಲು ತಮ್ಮೊಳಗೇ ಸ್ವಇಚ್ಛೆಯಿಂದ ಕಲಿಕಾ ಗುಂಪುಗಳನ್ನು ರಚಿಸಿಕೊಳ್ಳುವುದಕ್ಕೆ ಒತ್ತು ನೀಡಬೇಕು. ಅವರು ಕಾರ್ಯಾಗಾರದಲ್ಲಿ ತಾವು ಕಲಿತ ದೃಷ್ಟಿಕೋನ, ಜ್ಞಾನ ಮತ್ತು ಕೌಶಲ್ಯಗಳ ಮುಖ್ಯ ಅಂಶಗಳನ್ನು ತಮ್ಮ ತರಗತಿಕೋಣೆಗಳಲ್ಲಿ ಅನ್ವಯಿಸುವುದಕ್ಕೆ ಬೆಂಬಲ ನೀಡಬೇಕು. ಶಾಲೆಗಳಲ್ಲಿ ಶಿಕ್ಷಕರಿಗೆ ಬೆಂಬಲ ನೀಡುವುದು ಹಾಗೂ ಕಲಿಕೆಯನ್ನು ಟೆಲಿಕಾನ್ಫರೆನ್ಸ್‌ಗಳ ಮೂಲಕ ಹಂಚಿಕೊಳ್ಳುವುದು ಶೋಧಿಸಬೇಕಾದ ಇನ್ನಿತರ ಸಾಧ್ಯತೆಗಳಾಗಿವೆ.

ಸಂಪೂರ್ಣವಾಗಿ ಸಂಪನ್ಮೂಲಭರಿತವಾದ ಶಿಕ್ಷಕ ಕಲಿಕಾ ಕೇಂದ್ರಗಳನ್ನು ಶಿಕ್ಷಕರು ವಾಸಿಸುವ ಪ್ರದೇಶಗಳ ಬಳಿಯೇ ನಿರ್ಮಿಸಬೇಕು ಹಾಗೂ ಚರ್ಚೆ,

ಕಲಿಕೆಯ ವಿನಿಮಯ, ಪ್ರಸ್ತುತ ಚಲನಚಿತ್ರ ಹಾಗೂ ವಿಡಿಯೋಗಳ ವೀಕ್ಷಣೆ ಮುಂತಾದವುಗಳನ್ನು ಶಾಲೆಯ ಕಾರ್ಯಾವಧಿಯ ನಂತರದಲ್ಲಿ ಸಾಯಂಕಾಲದ ಸಮಯ ಹಾಗೂ ವಾರಾಂತ್ಯಗಳಲ್ಲಿ ಆಯೋಜಿಸಬೇಕು. ಪ್ರತಿ ತಾಲ್ಲೂಕಿನಲ್ಲಿಯೂ ಕನಿಷ್ಠ ಎರಡು ಮೂರಾದರೂ ಇಂತಹ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ.

ಶಾಲೆಗಳಲ್ಲಿ ಶಿಕ್ಷಕರೊಡನೆ ನಿಕಟವಾಗಿ ಕೆಲಸ ಮಾಡಿದ ನಮ್ಮ ಅನುಭವದ ಹಿನ್ನೆಲೆಯಲ್ಲಿ, ಸೇವಾನಿರತ ಶಿಕ್ಷಕರ ಅಭಿವೃದ್ಧಿಯ ಪ್ರಯತ್ನಗಳನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು ಕೆಳಗಿನ ಬದಲಾವಣೆಗಳನ್ನು ಅಳವಡಿಸಿಕೊಳ್ಳಬಹುದು:

ದೀರ್ಘಕಾಲೀನವಾದ ತಮ್ಮ ವೃತ್ತಿಪರ ಬೆಳವಣಿಗೆಯ ಹೊಣೆಯನ್ನು ಶಿಕ್ಷಕರು ತಾವೇ ವಹಿಸಿಕೊಳ್ಳುವ ಹಾಗೆ ಆಗಬೇಕು. ಇದರರ್ಥ, ಶಿಕ್ಷಕರಿಗೆ ಹಲವಾರು ಕೋರ್ಸ್‌ಗಳನ್ನು ಒದಗಿಸಿ ಅವರು ಅದರಲ್ಲಿ ಯಾವುದು ಅಗತ್ಯವೋ ಅದನ್ನು ಆರಿಸಿಕೊಳ್ಳುವ ಹಾಗೆ ಮಾಡಬೇಕು. ಇದರಿಂದ ಅವರಿಗೆ ತಾವು ಯಾವ ಹಂತದಲ್ಲಿ ಇದ್ದೇವೆ ಎನ್ನುವುದನ್ನು ಅವಲಂಬಿಸಿ, ತಮ್ಮ ಅಭಿವೃದ್ಧಿಯಲ್ಲಿ ತಮ್ಮದೇ ಗತಿಯಲ್ಲಿ ತೊಡಗಿಕೊಳ್ಳಲು ಅನುವು ಮಾಡಿಕೊಟ್ಟಂತೆ ಆಗುತ್ತದೆ.

ಇದಕ್ಕೆ ಒಂದರಿಂದ ಹತ್ತನೆಯ ತರಗತಿಯವರೆಗಿನ ಎಲ್ಲ ಪ್ರಸ್ತುತ ಪರಿಕಲ್ಪನೆಗಳನ್ನು ಗುರುತಿಸುವ ಸಮಗ್ರ ಸ್ವರೂಪದ ಪಠ್ಯಕ್ರಮವೊಂದನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ವಿಶೇಷವಾಗಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಪ್ರಸ್ತುತವಾಗಿರುವ ಸಾಂದರ್ಭಿಕ ಓದಿಗೆ ಬೇಕಾದ ಅಥವಾ ಪಠ್ಯಕ್ರಮಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಕೂಡ ಅಭಿವೃದ್ಧಿಪಡಿಸಬೇಕಿದೆ.

ರಾಜ್ಯದ ಉದ್ದಗಲಕ್ಕೂ ಇರುವ ಶಿಕ್ಷಕರು, ಶಿಕ್ಷಕ ಶಿಕ್ಷಕರು ಹಾಗೂ ಅಧಿಕಾರಿಗಳಲ್ಲಿ ಪಠ್ಯಕ್ರಮ ಹಾಗೂ ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸಲು ಹಾಗೂ ತರಬೇತಿ ನೀಡುವ ಸಾಮರ್ಥ್ಯವಿರುವ, ಕಾರ್ಯ ನಿರ್ವಹಿಸಲು ಸಮರ್ಥರಾದ ಹಾಗೂ ಬದ್ಧ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ, ಅವರನ್ನು ನಿರ್ದಿಷ್ಟ ಕಾರ್ಯಗಳಲ್ಲಿ ತೊಡಗಿಸುವುದು ಹೆಚ್ಚಿನ ಗಮನವನ್ನು ಬೇಡುವ ಇನ್ನೊಂದು ಮುಖ್ಯ ಅಂಶವಾಗಿದೆ. ಈ ಗುಂಪಿನ ಅಭಿವೃದ್ಧಿಗೆ ಪ್ರತಿ ವರ್ಷ ಸಾಕಷ್ಟು ಸ್ಥಳ, ಸಮಯವನ್ನು ಕೊಟ್ಟು ಪ್ರಯತ್ನಗಳನ್ನು ಅಗತ್ಯವಾಗಿ ಮಾಡಬೇಕಾಗಿದೆ.

ಸೂಕ್ತ ವಸತಿ ಸೌಲಭ್ಯವನ್ನು ಹೊಂದಿರುವುದು ಹಾಗೂ ಶಿಕ್ಷಕರ ನಡುವೆ ಆರೋಗ್ಯಕರ ಶೈಕ್ಷಣಿಕ ಸಂವಾದ-ಚರ್ಚೆಗಳು ನಡೆಯಲು ಅಗತ್ಯವಾದ ಅನುಕೂಲಕರ ಸ್ಥಳಾವಕಾಶ ನಿರ್ಮಿಸುವುದರ ಮಹತ್ವವನ್ನು ಸರ್ಕಾರವು ಈಗಾಗಲೇ ಗುರುತಿಸಿದೆ. ಮೊದಲ ಹೆಜ್ಜೆಯಾಗಿ, ರಾಜ್ಯದಲ್ಲಿರುವ ಎಲ್ಲಾ ಡಯಟ್‌ಗಳು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ(ಸಿಟಿಇ)ಗಳು ಹಾಗೂ ಬ್ಲಾಕ್ ಸಂಪನ್ಮೂಲ ಕೇಂದ್ರಗಳು

ಸಂಪೂರ್ಣವಾಗಿ ಸುಸಜ್ಜಿತಗೊಳ್ಳಬೇಕು ಹಾಗೂ ಸೇವಾನಿರತ ತರಬೇತಿಗೆ ಅನುಕೂಲಕರವಾಗುವಂತೆ ಅವುಗಳನ್ನು ಸಜ್ಜುಗೊಳಿಸಬೇಕು.

ಶಿಕ್ಷಕರ ಅಭಿವೃದ್ಧಿಗಾಗಿ ಪ್ರಸಕ್ತ ಕೊಡಮಾಡುತ್ತಿರುವ ಪ್ರತಿ ದಿನದ ವೆಚ್ಚವು (ದಿನವೊಂದಕ್ಕೆ ಇನ್ನೂರು ರೂಪಾಯಿಗಳು) ಅತ್ಯಂತ ಕಡಿಮೆಯದಾಗಿದೆ. ರಾಜ್ಯ ಸರ್ಕಾರವು ಅತ್ಯಂತ ಮುಖ್ಯವಾದ ಈ ಉದ್ದೇಶಕ್ಕೆ ಹೆಚ್ಚುವರಿ ಹಣಕಾಸನ್ನು ಒದಗಿಸಲು ಮಾರ್ಗ ಹಾಗೂ ವಿಧಾನಗಳನ್ನು ಹುಡುಕಲೇಬೇಕು. ಹಣಕಾಸು ಸರಿಯಾದ ಸಮಯಕ್ಕೆ ವಿತರಣೆಯಾಗಬೇಕು, ಹಣವನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಬಿಡುಗಡೆ ಮಾಡಬಾರದು.

ಕೇರಳದಲ್ಲಿ ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ, ಶಾಲೆಗಳು ಕಾರ್ಯ ನಿರ್ವಹಿಸದ ದಿನಗಳಲ್ಲಿ ಅವಕಾಶವನ್ನು ನಿರ್ಮಿಸಲಾಗಿದೆ. ಕರ್ನಾಟಕದಲ್ಲಿಯೂ ಸರ್ಕಾರವು ಸೇವಾನಿರತ ತರಬೇತಿಯನ್ನು ಬೇಸಿಗೆ ಮತ್ತು ಅಕ್ಟೋಬರ್ ರಜೆಯ ಅವಧಿಯಲ್ಲಿ ನಡೆಸುವಂತೆ ಆಲೋಚಿಸಬಹುದು. ಶಿಕ್ಷಕರು ತಮ್ಮ ಕುಟುಂಬಗಳೊಡನೆ ಸಮಯವನ್ನು ಕಳೆಯುವುದಕ್ಕೆ ಧಕ್ಕೆಯಾಗದ ರೀತಿಯಲ್ಲಿ ಸುಸಂಬದ್ಧ ವೇಳಾಪಟ್ಟಿಯೊಂದನ್ನು ರಚಿಸಿ, ಅವರು ತಮ್ಮ ಸಮಯವನ್ನು ಸಮರ್ಪಕವಾಗಿ ಯೋಜಿಸಿಕೊಳ್ಳಲು ಅನುಕೂಲವಾಗುವಂತೆ ಸಾಕಷ್ಟು ಮುಂಚಿತ ವಾಗಿಯೇ ಅಧಿಸೂಚನೆಯನ್ನು ಕಳುಹಿಸಬಹುದು. ಶಿಕ್ಷಕರ ಸಂಘಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಹಾಗೂ ಈ ನಿರ್ಣಯಗಳಲ್ಲಿ ಅವು ಕೂಡ ಭಾಗೀದಾರರಾಗಿರುವಂತೆ ನೋಡಿಕೊಳ್ಳುವುದು ಕೂಡ ಅಗತ್ಯ ಕ್ರಮವಾಗಿದೆ.

ಸಿಇಟಿಯಂತಹ ಪಾರದರ್ಶಕವಾದ, ಶಿಕ್ಷಕರ ಆಯ್ಕೆ ಪ್ರಕ್ರಿಯೆಯನ್ನು ಹೊಂದಿರುವ ವಿಷಯದಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ ಹಾಗೂ ಅನುತ್ತೀರ್ಣರಹಿತ ನೀತಿಯನ್ನು ದೃಢವಾಗಿ ಪಾಲಿಸುತ್ತಿದೆ. ಸದ್ಯದ ಆಡಳಿತ ವ್ಯವಸ್ಥೆಯು ಸೇವಾನಿರತ ಶಿಕ್ಷಕರ ಅಭಿವೃದ್ಧಿಯ ವಿಚಾರದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವ ಉತ್ಸಾಹವನ್ನೂ ತೋರಿದೆ.

ಡಿಎಸ್ಇಆರ್‌ಟಿ ಮತ್ತು ಎಸ್ಎಸ್ಎಗಳು ಈ ಬದಲಾವಣೆಗಳಲ್ಲಿ ಬಹಳಷ್ಟನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿಯೇ ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ ಹಾಗೂ ಆ ಮೂಲಕ ಸರ್ಕಾರಿ ಶಾಲೆಗಳನ್ನು ಅವಕಾಶ ವಂಚಿತ ಮಕ್ಕಳ ಪಾಲಿಗೆ ಉತ್ಸಾಹಪೂರ್ಣ ಕಲಿಕೆಯ ತಾಣಗಳನ್ನಾಗಿಸುತ್ತವೆ ಎಂದು ಭಾವಿಸಬಹುದು.

■

ಬಿ.ಫಸ್ಟ್, 07–11–2016